30/1

# 2005

## MANAGEMENT

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory***.*
*Answer any* **three** *questions in Part D.*

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

**1.** (a) Distinguish between Strategies and Policies.

(b) What is a 'Virtual Organization' ?

(c) What is 'Opportunity Cost' ? How is this relevant for managerial decisions ?

(d) 'The median, unlike the arithmetic mean, is not affected by extreme values.' — Discuss.

## ಭಾಗ A

$4 \times 5 = 20$

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) 'ಕಾರ್ಯೋಪಾಯ' ಮತ್ತು 'ಧೋರಣೆ'ಗಳಿಗೆ ಇರುವ ವ್ಯತ್ಯಾಸವನ್ನು ಸ್ಪಷ್ಟ ಪಡಿಸಿ.

   (ಬಿ) 'ಕಾರ್ಯತಃ ಸಂಸ್ಥೆ (Virtual Organization)' ಎಂದರೇನು ?

   (ಸಿ) ಸಂದರ್ಭಾನುಕೂಲ ವೆಚ್ಚ (Opportunity Cost)' ಎಂದರೇನು ? ವ್ಯವಸ್ಥಾಪನಾ ನಿರ್ಧಾರಗಳಿಗೆ ಇದು ಹೇಗೆ ಪ್ರಸ್ತುತ ?

   (ಡಿ) "ಮಧ್ಯಸ್ಥವು ಗಣಿತೀಯ ಮಧ್ಯಪದದಂತೆ ಅತಿರಿಕ್ತ ಮೌಲ್ಯಗಳಿಂದ ಪ್ರಭಾವಿತವಾಗುವುದಿಲ್ಲ." — ಚರ್ಚಿಸಿ.

## PART B

*10×10=100*

*Answer each question in about 100 words. Each question carries 10 marks.*

1. In your opinion, what are the most important components to include in writing a mission statement for a company ?

2. As a manager, what criteria will you favour to determine your span of management ?

3. What do you mean by 'Management by Objective (MBO)' ? Is it a myth or a fact that MBO contributes towards the success of an organization ?

4. Describe the 'Path — goal' approach to leadership effectiveness.

5. Distinguish between a 'Committee', a 'Team' and a 'Group'.

6. What is 'Trade-off' ? How is it relevant to decision-making ?

7. Explain the meaning and uses of 'Transportation' and 'Assignment' models.

8. Discuss the methods for estimating a demand function.

9. Explain the following :

   (a) Sensitivity Analysis

   (b) Monte Carlo Simulation Technique

10. Why is poor delegation of authority often found to be the most important cause of managerial failure ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

1. ನಿಮ್ಮ ಅಭಿಪ್ರಾಯದಲ್ಲಿ, ಒಂದು ಕಂಪನಿಯ ಉದ್ದೇಶ ವಿವರಣ ಪತ್ರವನ್ನು ಬರೆಯುವಾಗ ಅದರಲ್ಲಿ ಸೇರಿಸಿಕೊಳ್ಳಬೇಕಾದ ಅತಿಮುಖ್ಯ ಅಂಶಗಳು ಯಾವುವು ?

2. ಒಬ್ಬ ವ್ಯವಸ್ಥಾಪಕನಾಗಿ, ನೀವು ನಿಮ್ಮ ವ್ಯವಸ್ಥಾಪನಾ ವ್ಯಾಪ್ತಿಯನ್ನು ನಿರ್ಧರಿಸಲು, ಯಾವ ಆಳತೆಗೋಲಿಗೆ ಆದ್ಯತೆ ನೀಡುತ್ತೀರಿ ?

3. 'ಧ್ಯೇಯಬದ್ಧ ವ್ಯವಸ್ಥಾಪನೆ (MBO)' ಎಂದರೇನು ? ಒಂದು ಸಂಸ್ಥೆಯ ಯಶಸ್ಸಿಗೆ ಧ್ಯೇಯಬದ್ಧ ವ್ಯವಸ್ಥಾಪನೆಯ ಕೊಡುಗೆ ಅಪಾರ ಎಂಬುದು ಕಟ್ಟುಕಥೆಯೆ ? ಅಥವಾ ವಾಸ್ತವ ಸಂಗತಿಯೆ ?

4. ನಾಯಕತ್ವದ ಪರಿಣಾಮಕಾರಿತ್ವಕ್ಕೆ 'ಮಾರ್ಗ - ಗುರಿ' ದೃಷ್ಟಿಕೋನ ಕುರಿತು ವಿವರಿಸಿ.

5. 'ಸಮಿತಿ', 'ತಂಡ', ಮತ್ತು 'ಗುಂಪು' - ಇವುಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

6. 'ಟ್ರೇಡ್-ಆಫ್' ಎಂದರೇನು ? ನಿರ್ಧಾರ ರೂಪಿಸುವುದಕ್ಕೆ ಇದು ಹೇಗೆ ಪ್ರಸ್ತುತವಾಗಿದೆ ?

7. 'ಸಾಗಣೆ' ಮತ್ತು 'ಹಸ್ತಾಂತರಣ' ಮಾದರಿಗಳ ಅರ್ಥ ಮತ್ತು ಉಪಯೋಗಗಳನ್ನು ವಿವರಿಸಿ.

8. ಒಂದು 'ಡಿಮಾಂಡ್ ಪ್ರತಿಫಲನ'ವನ್ನು ಅಂದಾಜು ಮಾಡುವ ವಿಧಾನಗಳನ್ನು ಕುರಿತು ಚರ್ಚಿಸಿ.

9. ಕೆಳಗಿನವುಗಳನ್ನು ವಿವರಿಸಿ :

   (ಎ) ಸಂವೇದಿತ್ವ ವಿಶ್ಲೇಷಣೆ

   (ಬಿ) ಮಾಂಟೆ ಕಾರ್ಲೊ ಸಿಮ್ಯುಲೇಷನ್ ತಂತ್ರ

10. ಪ್ರಾಧಿಕಾರದ ಕಳಪೆ ನಿಯೋಜನೆಯು ಯಾಕೆ ವ್ಯವಸ್ಥಾಪನಾ ವೈಫಲ್ಯದ ಬಹುಮುಖ್ಯ ಕಾರಕವಾಗಿ ಕಂಡುಬರುತ್ತದೆ ?

## PART C

*6×15=90*

*Answer each question in about 150 words. Each question carries 15 marks.*

1. Every employee wants to be recognized for his/her good performance. How can organizations address the need of employees for recognition ? Explain with the help of an example.

2. Consider a situation in which an employee's superior gives him instructions to carry out certain tasks that are against his values and principles. The employee is faced with the dilemma of whether he should obey his superior's orders or act according to his personal values and principles. The employee thus experiences a role conflict. What is role conflict and what are the effects of role conflict on employees and organizations ?

3. Innovation results from thinking. A leader has to continuously encourage his employees to think creatively. It is only the thinking power of the employees that creates a great organization. Suggest how the leader should encourage thinking in the organization.

4. What do you mean by 'decision-making under risk' ? Explain the methods by which one can arrive at the optimum strategy under risk.

5. Discuss pricing and output decisions under monopolistic competition.

6. Explain the Planning – Programming – Budgeting System (PPBS) as a method of specialized budgetary control.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

1. ತನ್ನ ಉತ್ತಮ ಕಾರ್ಯ ನಿರ್ವಹಣೆಗಾಗಿ ತನ್ನನ್ನು ಗುರುತಿಸಬೇಕು ಎಂದು ಪ್ರತಿಯೊಬ್ಬ ಉದ್ಯೋಗಿಯೂ ಅಪೇಕ್ಷಿಸುತ್ತಾನೆ(ಳೆ). ಈ ಅಪೇಕ್ಷೆಯ ಪೂರೈಕೆಯನ್ನು ಸಂಸ್ಥೆಗಳು ಹೇಗೆ ನಿಭಾಯಿಸಲು ಸಾಧ್ಯ ? ಒಂದು ಉದಾಹರಣೆಯೊಂದಿಗೆ ವಿವರಿಸಿ.

2. ಒಬ್ಬ ಉದ್ಯೋಗಿಯ ಮೇಲ್ವಿಚಾರಕನು, ಆ ಉದ್ಯೋಗಿಯ ಸ್ವಂತ ಮೌಲ್ಯಗಳು ಹಾಗೂ ತತ್ವಗಳಿಗೆ ವಿರುದ್ಧವಾದಂಥ ಕೆಲವೊಂದು ಕಾರ್ಯಗಳನ್ನು ಆತನಿಗೆ ವಹಿಸುತ್ತಾನೆ ಎಂದಿಟ್ಟುಕೊಳ್ಳೋಣ. ಆಗ ಉದ್ಯೋಗಿಯು ತನ್ನ ಮೇಲ್ವಿಚಾರಕನ ಆದೇಶಗಳನ್ನು ಪಾಲಿಸುವುದೋ ಅಥವಾ ತನ್ನ ಸ್ವಂತ ಮೌಲ್ಯಗಳು ಹಾಗೂ ತತ್ವಗಳಿಗೆ ಅನುಗುಣವಾಗಿ ನಡೆದುಕೊಳ್ಳುವುದೋ ಎಂಬ ತೊಳಲಾಟಕ್ಕೆ ಸಿಲುಕುತ್ತಾನೆ. ಹೀಗಾಗಿ ಇಲ್ಲಿ ಉದ್ಯೋಗಿಯು ಪಾತ್ರ ಘರ್ಷಣೆಗೆ (Role conflict) ಒಳಗಾಗುತ್ತಾನೆ. 'ಪಾತ್ರ ಘರ್ಷಣೆ ಎಂದರೇನು ? ಉದ್ಯೋಗಿ ಹಾಗೂ ಸಂಸ್ಥೆಯ ಮೇಲೆ ಇದರ ಪರಿಣಾಮವೇನು ? ವಿವರಿಸಿ.

3. ಚಿಂತನೆಯಿಂದ ನವೀನತೆ ಸಾಧ್ಯವಾಗುತ್ತದೆ. ನಾಯಕನಾದವನು, ತನ್ನ ಉದ್ಯೋಗಿಗಳನ್ನು ಸೃಜನಾತ್ಮಕವಾಗಿ ಚಿಂತಿಸುವಂತೆ ಸತತವಾಗಿ ಉತ್ತೇಜಿಸುತ್ತಿರಬೇಕು. ಉದ್ಯೋಗಿಗಳ ಇಂಥ ಚಿಂತನಾ ಶಕ್ತಿಯಿಂದಲೇ ಸಂಸ್ಥೆಯೊಂದು ಉನ್ನತ ಸ್ಥಾನಕ್ಕೇರಬಹುದು. ಸಂಸ್ಥೆಯಲ್ಲಿ, ಯಾವ ರೀತಿಯಲ್ಲಿ ನಾಯಕನಾದವನು ಚಿಂತನಾಕ್ರಮವನ್ನು ಉತ್ತೇಜಿಸಬೇಕು ? ಸಲಹೆ ಕೊಡಿ.

4. 'ನಷ್ಟಸಂಭವತೆ ಸ್ಥಿತಿಯಲ್ಲಿ ನಿರ್ಣಯ ಕೈಗೊಳ್ಳುವುದು' ಎಂದರೇನು ? ನಷ್ಟಸಂಭವತೆಯ ಸಂದರ್ಭದಲ್ಲಿ ಅನುಕೂಲತಮ ತಂತ್ರೋಪಾಯವನ್ನು ರೂಪಿಸುವ ವಿಧಾನಗಳು ಯಾವುವು ? ವಿವರಿಸಿ.

5. ಏಕಸ್ವಾಮ್ಯ ಪೈಪೋಟಿಯ ಸಂದರ್ಭದಲ್ಲಿ ಬೆಲೆ ನಿರ್ಣಯ ಮತ್ತು ಉತ್ಪತ್ತಿ ಕುರಿತು ಕೈಗೊಳ್ಳಬೇಕಾದ ನಿರ್ಣಯಗಳ ಬಗ್ಗೆ ಚರ್ಚಿಸಿ.

6. ಒಂದು ವಿಶೇಷ ರೀತಿಯ ಬಜೆಟ್ ನಿಯಂತ್ರಣ ವಿಧಾನವಾಗಿರುವ 'ಯೋಜನೆ — ಕಾರ್ಯಕ್ರಮರೂಪಿಕೆ — ಬಜೆಟಿಂಗ್' ಪದ್ಧತಿ (PPBS) ಯನ್ನು ವಿವರಿಸಿ.

[Turn over

## PART D

*3×30=90*

*Answer any* **three** *of the following questions, each in about 300 words. Each question carries 30 marks.*

1. 'A Post-Completion Audit (PCA) may serve as a major vehicle for project analysis and also help to reinforce the learning curve for the organization.' — Do you agree with this statement ? Substantiate your arguments focusing on the purpose of PCA, its design procedures and the strategies employed.

2. 'Change for the sake of change is no change at all.' — Comment on this statement and show why change for the sake of change would be detrimental to the health of the organization.

3. 'Trust is the basic foundation of preventing or reducing conflict'. — Explain this statement and suggest some methods by which trust can be built at various levels among the people in an organization.

4. A person wants to invest in two independent investment schemes, A and B, but he can undertake only one at a time due to certain constraints. He can choose A first and then stop; or, if A is not successful, then take B or *vice versa*. The probability of success of A is 0·6, while for B, it is 0·4. The investment in both the schemes requires an initial capital outlay of Rs. 10,000/- and both return nothing if the venture is unsuccessful. Successful completion of A will return Rs. 20,000/- (over cost) and successful completion of B will return Rs. 24,000/- (over cost). Draw a decision tree and determine the best strategy.

## ಭಾಗ D

$3 \times 30 = 90$

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

1. "ಮುಕ್ತಾಯಾನಂತರದ ಪರಿಶೋಧನೆಯು (PCA) ಪರಿಯೋಜನಾ ವಿಶ್ಲೇಷಣೆಯ ಮುಖ್ಯ ಸಾಧನವಾಗಬಹುದು ಮತ್ತು ಸಂಸ್ಥೆಗೆ ಕಲಿಕಾ ಪರಿಣಾಮ ರೇಖೆ (Learning Curve) ಯನ್ನು ಬಲಪಡಿಸಲು ನೆರವಾಗಬಹುದು." — ಈ ಹೇಳಿಕೆಯನ್ನು ನೀವು ಒಪ್ಪುತ್ತೀರಾ ? PCA ಉದ್ದೇಶ, ಅದರ ವಿನ್ಯಾಸ ವಿಧಾನಗಳು ಮತ್ತು ಅದು ಅಳವಡಿಸಿಕೊಂಡಿರುವ ಕಾರ್ಯತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ವಾದವನ್ನು ಪುಷ್ಟೀಕರಿಸಿ.

2. "ಬದಲಾವಣೆಗಾಗಿ ಬದಲಾವಣೆ ಎಂದರೆ ಬದಲಾವಣೆಯೇ ಅಲ್ಲ." — ಈ ಹೇಳಿಕೆಯ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ ಮತ್ತು ಬದಲಾವಣೆಗಾಗಿಯೇ ಬದಲಾವಣೆ ಮಾಡುವುದು ಒಂದು ಸಂಸ್ಥೆಯ ಆರೋಗ್ಯಕ್ಕೆ ಹೇಗೆ ಮಾರಕವಾಗಬಹುದು ಎಂಬುದನ್ನು ವಿವರಿಸಿ.

3. 'ಯಾವುದೇ ಘರ್ಷಣೆಯನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ನಂಬಿಕೆ ಅಥವಾ ವಿಶ್ವಾಸವೇ ಮೂಲಾಧಾರ.' — ಈ ಅಂಶವನ್ನು ವಿವರಿಸಿ. ಒಂದು ಸಂಸ್ಥೆಯ ವಿವಿಧ ಹಂತದ ಉದ್ಯೋಗಿಗಳಲ್ಲಿ ವಿಶ್ವಾಸವನ್ನು ಹೇಗೆ ರೂಪಿಸಬಹುದು ಎಂಬುದಕ್ಕೆ ಕೆಲವು ವಿಧಾನಗಳನ್ನು ಸೂಚಿಸಿ.

4. ಒಬ್ಬ ವ್ಯಕ್ತಿಯು A ಮತ್ತು B ಎಂಬ ಎರಡು ಸ್ವತಂತ್ರ ಹೂಡಿಕೆ ಯೋಜನೆಗಳಲ್ಲಿ ಹೂಡಿಕೆ ಮಾಡಲು ಬಯಸುತ್ತಿದ್ದಾನೆ. ಆದರೆ, ಕೆಲವೊಂದು ಅಡಚಣೆಗಳಿಂದಾಗಿ ಆತ ಒಂದು ಸಲಕ್ಕೆ ಒಂದರಲ್ಲಿ ಮಾತ್ರ ಹೂಡಿಕೆ ಮಾಡಲು ಸಾಧ್ಯ. ಆತ ಮೊದಲು A ಯನ್ನು ಆಯ್ಕೆ ಮಾಡಿಕೊಂಡು ನಂತರ ನಿಲ್ಲಿಸಬಹುದು; ಅಥವಾ, A ಯಲ್ಲಿ ಯಶಸ್ವಿಯಾಗದಿದ್ದರೆ B ಯನ್ನು ಆಯ್ಕೆ ಮಾಡಿಕೊಳ್ಳಬಹುದು ಅಥವಾ ಇದರ ಅದಲುಬದಲಿನಂತೆಯೂ ಆಗಬಹುದು. A ಯಲ್ಲಿ ಯಶಸ್ಸಿನ ಸಾಧ್ಯತೆ 0·6 ಆದರೆ, B ಯಲ್ಲಿ ಅದು 0·4. ಈ ಎರಡೂ ಯೋಜನೆಗಳಲ್ಲಿ ಹೂಡಿಕೆಗೆ ಆರಂಭಿಕ ಬಂಡವಾಳ ವೆಚ್ಚವಾಗಿ 10,000 ರೂ. ಅಗತ್ಯ ಮತ್ತು ಈ ಪ್ರಯತ್ನದಲ್ಲಿ ಅಯಶಸ್ವಿಯಾದರೆ ಈ ಎರಡರಿಂದಲೂ ಏನೂ ಸಿಗುವುದಿಲ್ಲ. A ಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರೆ 20,000 ರೂ. (ವೆಚ್ಚವನ್ನು ಮೀರಿ) ಸಿಗುತ್ತದೆ ಮತ್ತು B ಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರೆ 24,000 ರೂ. (ವೆಚ್ಚವನ್ನು ಮೀರಿ) ಸಿಗುತ್ತದೆ. ನಿರ್ಣಯ ವೃಕ್ಷವನ್ನು ಬರೆದು ಅತ್ಯುತ್ತಮ ಉಪಾಯ ಯಾವುದು ನಿರ್ಧರಿಸಿ.

**5.** In a partially destroyed laboratory record of an analysis of correlation data, the following results only are obtained :

Regression equations are :

$$8X - 10Y = 64$$

$$40X - 18Y = 320$$

Find :

(i) The mean values of X and Y.

(ii) The coefficient of correlation between X and Y.

5. ಒಂದು ಸಹಸಂಬಂಧ ದತ್ತಾಂಶ ವಿಶ್ಲೇಷಣೆಯ ಭಾಗಶಃ ನಾಶವಾಗಿಹೋದ ಪ್ರಯೋಗಾಲಯ ದಾಖಲೆಯಲ್ಲಿ, ಕೆಳಗಿನ ಫಲಿತಾಂಶಗಳು ಮಾತ್ರ ಸಿಕ್ಕಿವೆ :
ರಿಗ್ರೆಷನ್ ಸಮೀಕರಣಗಳು :

$$8X - 10Y = 64$$

$$40X - 18Y = 320$$

ಕಂಡು ಹಿಡಿಯಿರಿ :

(i) X ಮತ್ತು Y ಗಳ ಸರಾಸರಿ ಮೌಲ್ಯಗಳು

(ii) X ಮತ್ತು Y ನಡುವಿನ ಸಹಸಂಬಂಧ ಗುಣಾಂಕ.

30/2

# 2005

## MANAGEMENT

## Paper 2

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

$4 \times 5 = 20$

*Answer each question in about 50 words. Each question carries 5 marks.*

1. (a) Explain what is meant by 'product' ?

   (b) What do you mean by 'cafeteria style' of reward system ?

   (c) Explain the production system model with an example.

   (d) State the significance of Debt-Equity ratio.

**ಭಾಗ A** *4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) 'ಉತ್ಪನ್ನ' ಎಂದರೇನು ? ವಿವರಿಸಿ.

(ಬಿ) 'ಕೆಫೆಟೇರಿಯಾ ಶೈಲಿ'ಯ ಮನ್ನಣೆ ಪದ್ಧತಿ ಎಂದರೇನು ?

(ಸಿ) ಒಂದು ಉದಾಹರಣೆಯೊಂದಿಗೆ ಉತ್ಪಾದನಾ ವ್ಯವಸ್ಥೆಯ ಆಕೃತಿ ಮಾದರಿಯನ್ನು ವಿವರಿಸಿ.

(ಡಿ) ಸಾಲ-ಈಕ್ವಿಟಿ ಅನುಪಾತದ ಮಹತ್ವವನ್ನು ವಿವರಿಸಿ.

## PART B

*10×10=100*

*Answer each question in about 100 words. Each question carries 10 marks.*

1. What is 'overtrading' ? What are its causes and consequences ?

2. Explain the potentiality of leasing as a source of corporate finance.

3. Define 'Quality'. State the different quality control techniques.

4. Define 'materials handling' and state its objectives. Discuss the principles of materials handling.

5. What is Human Resources Information System (HRIS) ?

6. State how you can attract and retain executive talent in an organization ?

7. Do you think that the performance of managers should be appraised regularly ? If so, how ?

8. What is meant by 'skimming-the-cream' price policy ? What are the reasons for adopting this policy ?

9. What is meant by 'Product life-cycle' ? Explain the concept with an example.

10. What is Customer Relationship Management (CRM) ? Explain the CRM process.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

1. 'ಓವರ್-ಟ್ರೇಡಿಂಗ್' ಎಂದರೇನು ? ಇದರ ಕಾರಣಗಳು ಮತ್ತು ಪರಿಣಾಮಗಳೇನು ? ತಿಳಿಸಿ.

2. ಕಾರ್ಪೋರೇಟ್ ಹಣಕಾಸಿನ ಮೂಲವಾಗಿ ಲೀಸಿಂಗ್‌ನ ಅಂತಃ ಸಾಮರ್ಥ್ಯ ಕುರಿತು ವಿವರಿಸಿ.

3. 'ಗುಣ' ಎಂದರೇನು ? ವಿವರಿಸಿ. ವಿವಿಧ ಬಗೆಯ ಗುಣ ನಿಯಂತ್ರಣ ತಂತ್ರಗಳನ್ನು ನಿರೂಪಿಸಿ.

4. 'ಸಾಮಗ್ರಿ ನಿಭಾಯಿಸುವಿಕೆ' ಎಂದರೇನು ? ಸೂತ್ರರೂಪದಲ್ಲಿ ಬರೆಯಿರಿ ಮತ್ತು ಇದರ ಉದ್ದೇಶಗಳನ್ನು ತಿಳಿಸಿ. 'ಸಾಮಗ್ರಿ ನಿಭಾಯಿಸುವಿಕೆ' ಯ ತತ್ವಗಳ ಬಗ್ಗೆ ಚರ್ಚಿಸಿ.

5. ಮಾನವ ಸಂಪನ್ಮೂಲಗಳ ಮಾಹಿತಿ ವ್ಯವಸ್ಥೆ (HRIS) ಎಂದರೇನು ?

6. ಸಂಸ್ಥೆಗೆ ಕಾರ್ಯನಿರ್ವಾಹಕ ಪ್ರತಿಭೆಯನ್ನು ಹೇಗೆ ಆಕರ್ಷಿಸುತ್ತೀರಿ ಮತ್ತು ಅದನ್ನು ಹೇಗೆ ಉಳಿಸಿಕೊಳ್ಳುತ್ತೀರಿ ? ವಿವರಿಸಿ.

7. ವ್ಯವಸ್ಥಾಪಕರ ಕಾರ್ಯನಿರ್ವಹಣೆಯ ಮೌಲ್ಯನಿರ್ಣಯ ನಿಯತಕಾಲಿಕವಾಗಿ ನಡೆಯುತ್ತಿರಬೇಕು ಎಂದು ನೀವು ಭಾವಿಸುತ್ತೀರಾ ? ಹಾಗಿದ್ದಲ್ಲಿ, ಅದನ್ನು ಹೇಗೆ ಮಾಡಬೇಕು ? ತಿಳಿಸಿ.

8. "ಕೆನೆ ತೆಗೆದುಕೊಳ್ಳುವ" ಬೆಲೆ ಧೋರಣೆ ಎಂದರೇನು ? ಈ ಧೋರಣೆಯನ್ನು ಅಳವಡಿಸಿಕೊಳ್ಳಲು ಕಾರಣವೇನು ?

9. 'ಉತ್ಪನ್ನದ ಜೀವನಚಕ್ರ' ಎಂದರೇನು ? ಈ ಪರಿಕಲ್ಪನೆಯನ್ನು ಒಂದು ಉದಾಹರಣೆಯೊಂದಿಗೆ ವಿವರಿಸಿ.

10. 'ಗ್ರಾಹಕ ಸಂಬಂಧದ ವ್ಯವಸ್ಥಾಪನೆ (CRM)' ಎಂದರೇನು ? CRM ಪ್ರಕ್ರಿಯೆಯನ್ನು ವಿವರಿಸಿ.

## PART C

*6×15=90*

*Answer each question in about 150 words. Each question carries 15 marks.*

1. Discuss the different elements of the marketing mix for rural markets.

2. Explain the concept of Brand Equity. Discuss the brand building process.

3. A company uses 1200 units per month of an electronic component, each costing Rs. 2/-. Placing each order costs Rs. 50/- and carrying cost is 6% per year of the average inventory.
   (i) Find EOQ.
   (ii) If the company gets 5% discount if it places a single order, should they accept the discount offer ?
   (iii) Find break-even discount percentage, which matches EOQ ordering.

4. What do you understand by the term 'Production Planning and Control' ? Explain the production planning and control functions.

5. Explain the major HR functions. Discuss the importance of HRD for Organization Development.

6. Discuss the new paradigms of financial management, which may be relevant to the liberalized scenario.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**1.** ಗ್ರಾಮೀಣ ಮಾರುಕಟ್ಟೆಗಳಿಗಾಗಿ "ಮಾರಾಟ ಮಿಶ್ರಣ" (Marketing Mix) ದ ವಿವಿಧ ಅಂಶಗಳನ್ನು ಕುರಿತು ಚರ್ಚಿಸಿ.

**2.** 'ಬ್ರ್ಯಾಂಡ್ ಈಕ್ವಿಟಿ' ಪರಿಕಲ್ಪನೆಯನ್ನು ವಿವರಿಸಿ. ಬ್ರ್ಯಾಂಡ್ ನಿರ್ಮಾಣ ಪ್ರಕ್ರಿಯೆ ಕುರಿತು ಚರ್ಚಿಸಿ.

**3.** ಒಂದು ಸಂಸ್ಥೆಯು ಪ್ರತಿ ತಿಂಗಳೂ ಒಂದು ಎಲೆಕ್ಟ್ರಾನಿಕ್ ಉಪಾಂಗದ 1200 ಘಟಕಗಳನ್ನು ಬಳಸುತ್ತದೆ. ಪ್ರತಿಯೊಂದು ಘಟಕದ ಬೆಲೆ 2 ರೂ. ಪ್ರತಿಯೊಂದು ಆದೇಶ ಸಲ್ಲಿಕೆಗೆ 50 ರೂ. ವೆಚ್ಚವಾಗುತ್ತದೆ ಮತ್ತು ಇದರ ನಿರ್ವಹಣ ವೆಚ್ಚವು ಪ್ರತಿ ವರ್ಷಕ್ಕೆ ಸರಾಸರಿ ಸರಕು ಮಟ್ಟದ 6% ಆಗಿರುತ್ತದೆ.

(i) EOQ ಕಂಡುಹಿಡಿಯಿರಿ

(ii) ಒಂದೇ ಸಲಕ್ಕೆ ಆದೇಶ ಸಲ್ಲಿಸಿದರೆ ಸಂಸ್ಥೆಗೆ 5% ಸೋಡಿ ಸಿಗುವುದಾದಲ್ಲಿ ಅವರು ಈ ಸೋಡಿ ಕೊಡುಗೆಯನ್ನು ಒಪ್ಪಿಕೊಳ್ಳಬೇಕೆ ?

(iii) EOQ ಆದೇಶ ಸಲ್ಲಿಕೆಗೆ ಅನುಗುಣವಾದಂಥ, ಲಾಭ-ನಷ್ಟರಹಿತ ಸೋಡಿ ಶೇಕಡಾವಾರು ಎಷ್ಟು ಎಂಬುದನ್ನು ಕಂಡುಹಿಡಿಯಿರಿ.

**4.** 'ಉತ್ಪಾದನಾ ಯೋಜನೆ ಮತ್ತು ನಿಯಂತ್ರಣ' ಎಂಬುದರ ಅರ್ಥವೇನು ? ಉತ್ಪಾದನಾ ಯೋಜನೆ ಮತ್ತು ನಿಯಂತ್ರಣ ಕಾರ್ಯಗಳನ್ನು ವಿವರಿಸಿ.

**5.** ಪ್ರಮುಖವಾದ ಮಾನವ ಸಂಬಂಧ (HR) ಕಾರ್ಯಗಳನ್ನು ವಿವರಿಸಿ. ಸಂಸ್ಥೆಯ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಯ ಪ್ರಮುಖ್ಯತೆ ಕುರಿತು ಚರ್ಚಿಸಿ.

**6.** ಉದಾರೀಕರಣದ ಸನ್ನಿವೇಶಕ್ಕೆ ಪ್ರಸ್ತುತವಾಗಬಹುದಾದ ಹಣಕಾಸು ವ್ಯವಸ್ಥಾಪನೆಯ ಹೊಸ ರೂಪಗಳನ್ನು ಕುರಿತು ಬರೆಯಿರಿ.

## PART D

*3×30=90*

*Answer any **three** of the following questions, each in about 300 words. Each question carries 30 marks.*

1. Discuss the various forces impacting formulation of dividend policy. Also, spell out the various types of dividend policies.

2. A factory manufacturing sewing machines has the capacity to produce 500 machines per annum. The variable cost of each machine is Rs. 200/- and each machine is sold for Rs. 250/-. Fixed overheads are Rs. 1200/- per annum. Calculate the break-even points for output and sales and show what profit will result if output is 90% of capacity ?

3. What is meant by Plant Layout ? Discuss the factors influencing plant layout. Bring out the differences between product layout and process layout.

4. What do you mean by 'Buying Motives' ? Explain the importance of studying consumer behaviour in marketing.

5. Prepare a comprehensive design for an effective supervisory training and development programme for an organization.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**1.** ಡಿವಿಡೆಂಡ್ ನೀತಿಯನ್ನು ರೂಪಿಸುವುದರ ಮೇಲೆ ಪ್ರಭಾವ ಬೀರುವ ವಿವಿಧ ಶಕ್ತಿಗಳನ್ನು ಕುರಿತು ವಿಶ್ಲೇಷಿಸಿ ಮತ್ತು ವಿವಿಧ ರೀತಿಯ ಡಿವಿಡೆಂಡ್ ನೀತಿಗಳನ್ನು ಕುರಿತು ಬರೆಯಿರಿ.

**2.** ಹೊಲಿಗೆ ಯಂತ್ರಗಳನ್ನು ತಯಾರಿಸುವ ಒಂದು ಕಾರ್ಖಾನೆಯು ವರ್ಷಕ್ಕೆ 500 ಯಂತ್ರಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ. ಪ್ರತಿಯೊಂದು ಯಂತ್ರದ ವ್ಯತ್ಯಾಸೀ ವೆಚ್ಚ 200 ರೂ. ಮತ್ತು ಪ್ರತಿಯೊಂದು ಯಂತ್ರವನ್ನು 250 ರೂ.ಗಳಿಗೆ ಮಾರಲಾಗುತ್ತಿದೆ. ಸ್ಥಿರ ವೆಚ್ಚಗಳು ವರ್ಷಕ್ಕೆ 1200 ರೂ. ಉತ್ಪತ್ತಿ ಮತ್ತು ಮಾರಾಟಗಳಿಗೆ ಲಾಭನಷ್ಟರಹಿತ ಬಿಂದುಗಳನ್ನು ಲೆಕ್ಕಹಾಕಿ ಮತ್ತು ಸಾಮರ್ಥ್ಯದ 90% ರಷ್ಟು ಉತ್ಪತ್ತಿ ಮಾಡಿದರೆ ಎಷ್ಟು ಲಾಭ ಬರುತ್ತದೆ ? ಲೆಕ್ಕಹಾಕಿ.

**3.** 'ಸ್ಥಾವರ ವಿನ್ಯಾಸ' ಎಂದರೇನು ? ಸ್ಥಾವರ ವಿನ್ಯಾಸವನ್ನು ಪ್ರಭಾವಿಸುವ ಸಂಗತಿಗಳ ಬಗ್ಗೆ ಚರ್ಚಿಸಿ. 'ಉತ್ಪನ್ನ ವಿನ್ಯಾಸ' ಮತ್ತು 'ಪ್ರಕ್ರಿಯಾ ವಿನ್ಯಾಸ'ಕ್ಕೆ ಇರುವ ವ್ಯತ್ಯಾಸಗಳೇನು ? ಸ್ಪಷ್ಟಪಡಿಸಿ.

**4.** 'ಖರೀದಿಸುವ ಪ್ರೇರಣೆಗಳು' ಎಂದರೇನು ? ವ್ಯಾಪಾರ ಕ್ರಿಯೆಯಲ್ಲಿ ಗ್ರಾಹಕರ ವರ್ತನೆಯನ್ನು ಅಭ್ಯಾಸ ಮಾಡುವುದರ ಮಹತ್ವ ಕುರಿತು ವಿವರಿಸಿ.

**5.** ಒಂದು ಸಂಸ್ಥೆಗಾಗಿ, ಪರಿಣಾಮಕಾರಿಯಾದ ಮೇಲ್ವಿಚಾರಕ ತರಬೇತಿ ಹಾಗೂ ಅಭಿವೃದ್ಧಿ ಕಾರ್ಯಕ್ರಮದ ಒಂದು ಸಮಗ್ರ ವಿನ್ಯಾಸವನ್ನು ಸಿದ್ಧಪಡಿಸಿ.